ಒ. ಎಸ್. ನಂ. 04 / 2022

ಪಿಡಬ್ಲೂ-1

ದಿನಾಂಕಃ 08.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ನಿಪಿ 4 ಸ್ಕೆಚ್ ತಯಾರಿಸಲು ಯಾವ ದಿನಾಂಕದಂದು ಅರ್ಜಿ ನೀಡಿರುತ್ತೀರಾ ಎಂದರೆ ನನ್ನ ಅಣ್ಣ ಅರ್ಜಿ ಕೊಟ್ಟಿರುತ್ತಾರೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿದ 10 ತಿಂಗಳ ನಂತರ ನಿಪಿ 4 ಅನ್ನು ತಯಾರಿಸಲು ಅರ್ಜಿ ಕೊಟ್ಟಿರುತ್ತೆವೆ ಎಂದರೆ ಸರಿ. ನಿಪಿ 4 ತಯಾರಿಸಲು ನಾನು ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಂದೇ ಜಮೀನು ಅಗಿದ್ದರಿಂದ ನನ್ನ ಅಣ್ಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ಅಧಿಕಾರಿಗಳ ಶಾಮಿಲಾಗಿ ನಿಪಿ 4 ಅನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಳತೆ ಮಾಡುವ ಮುನ್ನ ನನಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ಒಂದು ವೇಳೆ ಸರ್ವೆ ಅಧಿಕಾರಿಗಳು ಸ್ಥಳಕ್ಕೆ ಬಂದು ಅಳತೆ ಮಾಡಿದ್ದರೆ ನೋಟೀಸ್ ನೀಡುತ್ತಿದ್ದರು ಅವರು ಸ್ಥಳಕ್ಕೆ ಬಂದಿರಲಿಲ್ಲ ಹಾಗಾಗಿ ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಕೆಂಡಗಣ್ಣೆಗೌಡ ಮತ್ತು ನಾನು ನಿಪಿ 4 ಅನ್ನು ಸೃಷ್ಟಿ ಮಾಡಿಕೊಂಡಿರುತ್ತೆವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ**